ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.

**ಸಿ.ಸಿ.591/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಗೋವಿಂದಪ್ಪ | ಪ್ರಾಸಾಃ 03 |
| ತಂದೆಯ/ಗಂಡನ ಹೆಸರು | : | ತಿಮ್ಮಪ್ಪ | ಚಾಸಾಃ 03 |
| ವಯಸ್ಸು | : | 50 ವರ್ಷ | |
| ಕೆಲಸ | : | ವ್ಯವಸಾಯ | ಸಾ ಪ್ರ ಬೋ |
| ವಾಸ | : | ದೊಗ್ಗನಾಳ್ | ದಿಃ 11.04.2024 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ಈ ಕೇಸಿನ 1 ನೇ ಆರೋಪಿತರು ಗೊತ್ತು. ಇತರೆ ಆರೋಪಿತರು ಗೊತ್ತಿಲ್ಲ. ಈ ಪ್ರಕರಣದ ಚಾಸಾ-1 ಮತ್ತು 4 ರವರು ಗೊತ್ತು. ಚಾಸಾ-2 ರವರು ಗೊತ್ತಿಲ್ಲ. ಸಾಕ್ಷಿ ನಿಪಿ-2 ರ ಮಹಜರಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ನಿಪಿ-2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದೊಗ್ಗನಾಳು ಗ್ರಾಮದ ರಸ್ತೆಯಲ್ಲಿ ಮಾಡಿರುತ್ತೇನೆ. ಸುಮಾರು 4 ವರ್ಷಗಳ ಹಿಂದೆ ಸದರಿ ಸಹಿಯನ್ನು ಮಾಡಿರುತ್ತೇನೆ. ನಾನು ಸಹಿ ಮಾಡಿದಾಗ ಸಂಜೆ 5 ಗಂಟೆ ಆಗಿತ್ತು. ನನ್ನೊಂದಿಗೆ ಇತರೆ ಯಾರೂ ಸಹಿ ಮಾಡಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುವನ್ನು ಅಮಾನತ್ತುಪಡಿಸಿಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲು ಎ.ಪಿ.ಪಿ.ಯವರಿಂದಃ**

ದಿನಾಂಕ 31.12.2019 ರಂದು ಸಂಜೆ 5 ರಿಂದ 6 ಗಂಟೆ ಸಮಯದಲ್ಲಿ ಆರೋಪಿತರು ಮತ್ತು ಚಾಸಾ-1 ರವರ ನಡುವೆ ನಡೆದ ಗಲಾಟೆ ಕುರಿತು ಮಹಜರನ್ನು ಮಾಡಲು ಪೊಲೀಸರು ನನ್ನನ್ನು ಮತ್ತು ಚಾಸಾ-2 ರವರನ್ನು ಕರೆದಿದ್ದರು ಎಂದರೆ ಸರಿಯಲ್ಲ. ಆಗ ಚಾಸಾ-4 ರವರು ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಪೊಲೀಸರಿಗೆ ಗಲಾಟೆ ನಡೆದ ಸ್ಥಳವನ್ನು ತೋರಿಸಿದರು ಎಂದರೆ ಸರಿಯಲ್ಲ. ನ್ಯಾಯಾಲಯದ

ಮುಂದಿರುವ ಮು.ಮಾ-1 ಮತ್ತು 2 ರ ಕಲ್ಲು ಮತ್ತು ದೊಣ್ಣೆಯನ್ನು ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಚಾಸಾ-4 ರವರು ಪೊಲೀಸರಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಮಹಜರಿನ ಕಾಲಕ್ಕೆ ನಾನು ಉಪಸ್ಥಿತನಿದ್ದಾಗ್ಯೂ ಕೂಡ 1 ನೇ ಆರೋಪಿತರು ನನ್ನ ಸ್ನೇಹಿತರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ ಇಲ್ಲ</u>**

ಮರು ವಿಚಾರಣೆ ಇಲ್ಲ,

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ